ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ಸಚಿವರು) :

ಅ) ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಹೆಚ್ಚಿನ ಹಣ ನೀಡುವ ವಿಚಾರ ಸರ್ಕಾರವು ಪರಿಶೀಲನೆಯಲ್ಲಿದೆ.

ಆ) 1995-96ನೇ ಸಾಲಿನಲ್ಲಿ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಯೋಜನೆಯಡಿಯಲ್ಲಿ ರೂ. 110031.37 ಲಕ್ಷ ಹಾಗೂ ಯೋಜನೇತರ ಬಾಬಿನಲ್ಲಿ ರೂ. 135410.19 ಲಕ್ಷ ಹಣ ಒದಗಿಸಲಾಗಿದೆ. ಯೋಜನೆ ಬಾಬಿನಲ್ಲಿ ಒದಗಿಸಿದ ರೂ. 110031.37 ಲಕ್ಷ ಹಣದಲ್ಲಿ ಜಿಲ್ಲಾ ಪಂಚಾಯತಿಗಳಿಗೆ ರೂ. 37108.37 ಲಕ್ಷ ತಾಲ್ಲೂಕು ಪಂಚಾಯತಿಗಳಿಗೆ ರೂ. 46068.72 ಲಕ್ಷ ಮತ್ತು ಗ್ರಾಮ ಪಂಚಾಯತಿಗಳಿಗೆ ರೂ. 26854.28 ಲಕ್ಷ ಅನುದಾನವನ್ನು ನಿಗಧಿಗೊಳಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ನವೀಕರಣ ಕಾರ್ಡುಗಳಿಂದ ವಂಚಿತರಾದ ಪಲಾನುಭವಿಗಳಿಗೆ ಪರ್ಯಾಯ ವ್ಯವಸ್ಥೆ.

653 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಗ್ರಾಮೀಣ ಪ್ರದೇಶದಲ್ಲಿ ಇತ್ತೀಚೆಗೆ ಪಡಿತರ ಕಾರ್ಡುಗಳನ್ನು ನವೀಕರಣ ಮಾಡಲಾಗಿದ್ದು ಹಸಿರು ಕಾರ್ಡಿನ ಯೋಜನೆಯಡಿಯಲ್ಲಿ ಬರುವ ಅನೇಕ ಫಲಾನುಭವಿಗಳು ವಂಚಿತರಾಗಿದ್ದು ಈ ಜನಾಂಗಕ್ಕೆ ಅನ್ಯಾಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಈ ಜನಾಂಗಕ್ಕೆ ಪರ್ಯಾಯ ವ್ಯವಸ್ಥೆ ಮಾಡುವುದೇ;

ಶ್ರೀ ಎಸ್. ನಂಜಪ್ಪ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) :

ಅ) ಗ್ರಾಮ ಸಭೆಗಳನ್ನು ನಡೆಸಿದ ಸಮಯದಲ್ಲಿ ಕೆಲವು ಕುಟುಂಬಗಳು ನಿಗದಿಪಡಿಸಿದ ಆದಾಯಕ್ಕಿಂತ ಹೆಚ್ಚಿಗೆ ಇದ್ದ ಕಾರಣ ಗ್ರಾಮ ಸಭೆಗಳಲ್ಲಿ ನಿರ್ದರಿಸಿದಂತೆ 1,36,151 ಹಸಿರು ಪಡಿತರ ಚೀಟಿಗಳನ್ನು ರದ್ದು ಪಡಿಸಿದೆ.

ಆ) ಆದಾಯಕ್ಕಿಂತ ಜಾಸ್ತಿಯಿರುವ ಕುಟುಂಬಗಳಿಗೆ ಕೇಸರಿ ಪಡಿತರ ಚೀಟಿಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ.

ಹೊಸ ಪಶುವೈದ್ಯ ಆಸ್ಪತ್ರೆಗಳ ಮಂಜೂರಾತಿ.

654 - ಶ್ರೀ ಸಂಗಣ್ಣ ಕರಡಿ (ಕೊಪ್ಪಳ) ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1996-97ನೇ ಸಾಲಿನಲ್ಲಿ ಹೊಸದಾಗಿ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡುವಲ್ಲಿಯ ಸರ್ಕಾರದವರ ಮುಂದಿದೆಯೇ;

ಆ) ಹಾಗಿದ್ದಲ್ಲಿ ಕೊಪ್ಪಳ ತಾಲ್ಲೂಕಿನ

1. ಗೂಡ್ಲಿನೂರು ಕಾತರಕಿ

2. ಕೂಕನಹಳ್ಳಿ

3. ಹೀರೆಪಗನಳ್ಳಿ

ಗ್ರಾಮಗಳಲ್ಲಿ ಹೊಸದಾಗಿ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗುವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇನ್ನೂ ನಿರ್ಧರಿಸಿರುವುದಿಲ್ಲ.

ಆ) ಹೊಸ ಆಸ್ಪತ್ರೆಗಳನ್ನು ಮಂಜೂರು ಮಾಡುವ ಸಮಯದಲ್ಲಿ ಆದ್ಯತೆಯ ಮೇಲೆ ಪರಿಗಣಿಸಲಾಗುವುದು.

ಭೀಮಾನಗರ ವಸತಿ ಗೃಹಗಳಿಗೆ ಸುಣ್ಣ ಬಣ್ಣ ಮಾಡಿಸುವುದು.

656 - ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜೀವನ್ ಭೀಮಾ ನಗರದಲ್ಲಿ ವಸತಿಗೃಹಗಳಿಗೆ ಪ್ರತಿ ವರ್ಷ ಡಿಸ್ಟೆಂಪರ್ ಮತ್ತು ಬಣ್ಣಗಳನ್ನು ಮಾಡಿಸುತ್ತಿರುವುದು ನಿಜವಲ್ಲವೆ,

ಆ) ಅದೇ ರೀತಿ ರಾಜಾಜಿನಗರದಲ್ಲಿರುವ ವಸತಿ ಗೃಹಗಳಿಗೂ ಸಹ ಡಿಸ್ಟೆಂಪರ್ಮತ್ತು ಬಣ್ಣಗಳನ್ನು ಮಾಡಿಸಬೇಕಾಗಿದ್ದು, ಮಾಡಿಸದಿರಲು ಕಾರಣಗಳೇನು?

ಇ) ರಾಜಾಜಿನಗರದಲ್ಲಿರುವ ವಸತಿಗೃಹಗಳ ನಿವಾಸಿಗಳಿಂದ ಬಾಡಿಗೆ ವಸೂಲಾಗುತ್ತಿಲ್ಲವೆ. ಬಾಡಿಗೆ ವಸೂಲಾಗುತ್ತಿದ್ದರೂ ರಾಜಾಜಿನಗರದಲ್ಲಿರುವ ವಸತಿಗೃಹಗಳಿಗೆ ಸುಣ್ಣ ಬಣ್ಣ ಮಾಡಿಸದಿರಲು ಕಾರಣಗಳೇನು?

ಈ) ಜೀವನಭೀಮಾನಗರದಲ್ಲಿರುವ ವಸತಿಗೃಹಗಳಲ್ಲಿರುವ ಸೌಲಭ್ಯಗಳಂತೆ ರಾಜಾಜಿನಗರದಲ್ಲಿರುವ ವಸತಿಗೃಹಗಳಿಗೂ ಸಹ ಸೌಲಭ್ಯಗಳನ್ನು ಕಲ್ಪಿಸಲು ಅನೇಕಬಾರಿ ಮನವಿ ಸಲ್ಲಿಸಿದ್ದರೂ ಸಹ ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರಲು ಕಾರಣವೇನು?

ಉ) ಜೀವನಭೀಮಾನಗರದಲ್ಲಿರುವ ವಸತಿಗೃಹಗಳಲ್ಲಿರುವ ಸೌಲಭ್ಯಗಳಂತೆ ರಾಜಾಜಿನಗರದ ವಸತಿಗೃಹಗಳಿಗೂ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆಯೇ?